# ಬೆಳ್ಳಕ್ಕಿಗಳ ತಾಣ ಮುಂಡಿಗೆಕೆರೆ



ಶಿರಸಿ ತಾಲೂಕಿನ ಸೋಂದಾ ಗ್ರಾಮದ ಬಾಡಲಕೊಪ್ಪ ಮಜರೆಯಲ್ಲಿ ಮುಂಡಿಗೆ ಗಿಡಗಳಿಂದ ಆವೃತವಾದ ಕೆರೆಯಿದೆ. ಮುಂಗಾರು ಹಂಗಾಮು ಬಂತೆಂದರೆ ಬೆಳ್ಳಕ್ಕಿಗಳು ಎಲ್ಲಿಂದಲೋ ಹಾರಿ ಬಂದು ಇಲ್ಲಿ ನೆಲೆ ನಿಲ್ಲುತ್ತವೆ. ಕೆರೆಯಲ್ಲಿ ಬೆಳೆದಿರುವ ಮುಂಡಿಗೆ ಗಿಡಗಳಿಗೆ ಬಂದಿಳಿಯುವಾಗ ಸಾಕಷ್ಟು ಬಾರಿ ಮೇಲೆಯೇ ಹಾರುತ್ತಾ ಪರಾಮರ್ಶಿಸಿಕೊಂಡು ಬಂದು ಕುಳಿತುಕೊಳ್ಳುತ್ತವೆ. ಬೆಳ್ಳಕ್ಕಿಗಳು ಈ ಕೆರೆಗೆ ಬಂದಿಳಿದವೆಂದರೆ ಮಳೆಯ ಮುನ್ಸೂಚನೆ ದೊರೆಯುತ್ತದೆ. ಮುಂಡಿಗೆ ಗಿಡಗಳ ಮೇಲೆ ಗೂಡು ಕಟ್ಟಿ ಸಂತಾನಾಭಿವೃದ್ಧಿ ಮಾಡಿಕೊಂಡು ಹೋಗುತ್ತವೆ.  ಪಕ್ಷಿಗಳ ವೀಕ್ಷಣೆಗೆ ವಿಕ್ಷಣಾ ಗೋಪುರವಿದ್ದು ಜುಲೈ ಮಧ್ಯದಿಂದ ನವೆಂಬರ್ ಕೊನೆಯವರೆಗೆ ಸಕಾಲವಾಗಿದೆ.

**– ಆಶಾ  ಕೆರೆಗದ್ದೆ, ಶಿರಸಿ**



# ಹಲಸಿನ ರಂಗೋಲಿ

ರಂಗೋಲಿ ಎಂದ ಕೂಡಲೆ ನೆನಪಾಗುವುದು ರಂಗುರಂಗಿನ ವಿಶೇಷ ಬಣ್ಣದ ಪುಡಿ. ಈ ಬಣ್ಣದ ಹಿಟ್ಟಿನ ನೆರವಿಲ್ಲದೆ ಅತ್ಯಾಕರ್ಷಕ ರಂಗೋಲಿ ಮೂಡಿಸಬಹುದು ಎಂಬುದನ್ನು ಯಲ್ಲಾಪುರದಲ್ಲಿ ನಡೆದ ರಾಜ್ಯ ಮಟ್ಟದ ಹಲಸಿನ ಮೇಳದಲ್ಲಿ ಅನಿತಾ ರಾಘವೇಂದ್ರ ಹೆಗಡೆ ಸಾಬೀತುಪಡಿಸಿ ಪ್ರಥಮ ಸ್ಥಾನ ತಮ್ಮದಾಗಿಸಿಕೊಂಡರು.

ಅನಿತಾ ಅವರು ರಂಗೋಲಿಗೆ ಬಳಸಿದ್ದೆಲ್ಲವೂ ಹಲಸಿನ ಉತ್ಪನಗಳನ್ನೇ. ಹಲಸಿನ ಎಲೆ, ಹಣ್ಣಿನ ಸೊಳೆ, ಕಾಯಿಯ ಸೊಳೆ, ಮಿಡಿ ಹಲಸು, ಹಲಸಿನ ಒಣ ಹಾಗೂ ಹಸಿ ಬೀಜ, ಹಲಸಿನ ಚಾರೆ, ಹಲಸಿನ ಕಿರು ಸೊಳೆ ಇವುಗಳನ್ನೆ ಬಳಸಿ ರಂಗೋಲಿ ರಚಿಸಿದ್ದರು.

**–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ**

# ಮೊಗೆಕಾಯಿ ಸಂಗ್ರಹ



ಕರಾವಳಿ ಹಾಗೂ ಮಲೆನಾಡಿನ ಭಾಗದಲ್ಲಿ ಮೊಗೆಕಾಯಿ ಬಳಕೆ ಹೆಚ್ಚು. ಅದನ್ನು ಬಹಳ ದಿನಗಳವರೆಗೆ ಹಾಳಾಗದ ಹಾಗೆ ಇಡುವುದು ಸವಾಲಿನ ಕೆಲಸವೇ ಸರಿ. ಅದಕ್ಕಾಗಿ ಇಲ್ಲಿದೆ ಸುಲಭ ಉಪಾಯ. ಹಳೆಯ ಪಾಲಿಯೆಸ್ಟರ್ ಸೀರೆ ಅಥವಾ ದುಪಟ್ಟಾವನ್ನು ಉದ್ದಕ್ಕೆ ಸೀಳಿ, ಕಾಯನ್ನು ಕಟ್ಟಿ, ಜಂತಿಗೆ ಈ ರೀತಿ ತೂಗುಹಾಕಬಹುದು. ಕಾಯಿ ಹಾಳಾಗದ ಹಾಗೆ ಇಡುವುದರ ಜೊತೆಗೆ ಜಾಗದ ಉಳಿತಾಯವೂ ಆಗುತ್ತದೆ.

**–ಗಣೇಶ ಹೆಗಡೆ, ಎಕ್ಕಂಬಿ**